85
16

ಲವಾಡಿ ಕೊಳ್ಳುವದಕ್ಕೆ ಸ॥ 1860ನೇ ಇಸವೀ 27ನೇ ಆಕ್ಟ್ಪ ಮೇರೆ ಬಾಧ್ಯತೆ ಸರಟಫಿಕೇಟ್ ಕೊಡಿಸಬೇಕಾಗಿ ದರಖಾಸ್ತು ಮಾಡಿರುವ ಮೊಕದ್ದಮೆ ಸ॥ 1877ನೇ ಇಸವಿ ಫಿಬ್ರವರಿ ತಾರೀಖು 28ನೇ ದಿನ ಹಗಲು 11 ಘಂಟೆಗೆ ಈ ಕೋರ್ಟು ಮೊಕ್ಕಾಮಿನಲ್ಲಿ ಹಿಯರಿಂಗ್ ಆಗುವದ್ದರಿಂದ ಯಿದಕ್ಕೆ ಯಾರಾದರೂ ಹಕ್ಕುದಾರ್ರು ಯಿದ್ದರೆ ಸದರೀ ತಾರೀಖಿನ ದಿನ ಈ ಕೋರ್ಟು ರೂಬರೂ ಹಾಜರಾಗಿ ವ್ಯವಹರಿಸ ಬಹುದು.

Notice of an application by Annamma for a certificate under Act XXVII of 1860.

ಸ॥ 1877ನೇ ಇಸವಿ ಸಿವಿಲ್ ನಂಬರ್ 4.

ಇದರಿಂದ ಸರ್ವೇಜನರಿಗೂ ತಿಳಿಯಪಡಿಸುವದೇನಂದರೆ,—ವೀರರಾಜೇಂದ್ರ ಪೇಟೆಯಲ್ಲಿ ಯಿರುವ ಕಿರಸ್ತಾನರ ಪೇಟರ್‌ಸ್ ಹೆಂಡತಿ ಅಂನಮ್ಮ ಸಂಬವಳು ಪಾತೀ ಆದ ತನ್ನ ಗಂಡನಿಗೆ ಹೊರಗಿನಿಂದ ಬರತಕ್ಕ ಸುಮಾರು 5000 ರೂಪಾಯನ್ನು ತನ್ನ ಮಗ ಸಾಮುವೇಲ್ ಗೋಸರ ವಸೂಲ್ ಮಾಡುವದಕ್ಕೆ ಸ॥ 1860ನೇ ಇಸವೀ 27ನೇ ಆಕ್ಟ್ಪ ಮೇರೆ ಬಾಧ್ಯತೆ ಸರಟಫಿಕೇಟ್ ಕೊಡಿಸಬೇಕಾಗಿ ದರಖಾಸ್ತು ಮಾಡಿರುವದ್ದರಿಂದ ಈ ಮೊಕದ್ದಮೆ ಸ॥ 1877ನೇ ಇಸವೀ ಫಿಬ್ರವರೀ ತಾರೀಖು 28ಕ್ಕೆ ಕೋರ್ಟು ಮೊಕ್ಕಾಮಿನಲ್ಲಿ ವಿಚಾರಕ್ಕೆ ಮೊಕರರ್ ಮಾಡಿಯಿದೆ ಯಿದಕ್ಕೆ ಯಾರಾದರೂ ಹಕ್ಕುದಾರ್ರು ಯಾ ಆಕ್ಷೇಪಣೆ ಮಾಡತಕ್ಕವರು ಸಪ ಯಿದ್ದರೆ ಸದರೀ ತಾರೀಖಿನ ದಿನ ಹಗಲು 11 ಘಂಟೆಗೆ ಹಾಜರಾಗಿ ವೆವಹರಿಸ ಬಹುದು

ಬತಾರೀಖು 25ನೇ ಜನವರೀ 1877ನೇ ಇಸವೀ.

E. SHAW,
Offg. Supt.

ಮದರಾಸ್ ರೆಯಿಲ್‌ವೇ.

ಜವಳಿ ಮತ್ತು ನೂಲು.

ತಾರೀಖು 30ನೇ ಜನವರೀ 1877.

ಇದರಿಂದ ತಿಳಿಸಲ್ಪಡುವದೇನಂದರೆ, —ಬೊಂಬಾಯಿ ಯಿಂದ ಮದರಾಸಿಗೆ ರವಾನೇ ಬಗ್ಯೆ 1877ನೇ ಫಿಬ್ರವರೀ 1ನೇ ಮರ್ತು ನಲ್ಲಿ ಯಾ ಆತರುವಾಯ ಭರ್ತೀಯಾಗುವ ಜವಳಿ ಮತ್ತು ನೂಲು ಸಹ 82 ಪೌನುಗಳ ಬಾಬತು ಬಂಗಾಳೀ ಮಣ ವಂದಕ್ಕೆ ಕಮ್ಮೀಯಾದ ದರ 1—12 ಪ್ರಕಾರ ಚಾರ್ಜು ಮೊಕರರ್ ಆಗುವದು.

R. B. ELWIN,
Agent and Manager.

ಕರ್ಣಸಿನೋಟ್.

ಈ ಕೆಳಗೆ ನಮೂದಿಸಲ್ಪಡುವ ಕರ್ಣಸಿನೋಟುಗಳ ತುಕಡೆಗಳು ಬೆಂಗಳೂರಿಂದ ಕ್ಲೋಸ್‌ಪೇಟೆಗೆ ಟಪ್ಪಾಲ್ ದ್ವಾರಾ ರವಾನೆ ಆಗುವಲ್ಲಿ ಹೋಗಿರುತವೆ.

ನಂ.	ಸರ್ಕಲ್	ಮೊಬಲಗ	
$\frac{B}{50}$ 57195	ಮದ್ರಾಸ್	100	ಹಕ್ಕುದಾರ ಬೆಂಗಳೂರು ಲಷ್ಕರಿನಲ್ಲಿರುವ ಕುರ್ಮರ್ದಾ ಖಾದರ್‌ಸಾಬ್.
$\frac{B}{50}$ 52273	ಡಿಟೋ	100	
.. 48664	ಡಿಟೋ	100	

Mysore Government Press, Bangalore—1877.